

# ತಾಯ್ತನ–ವಿಳಂಬವೇಕೆ?

**ಯಾವುದೇ ಸಮಸ್ಯೆಯ ಪರಿಹಾರ ನಾವು ಆ ಸಮಸ್ಯೆಯನ್ನು ಯಾವ ದೃಷ್ಟಿಯಿಂದ ನೋಡುತ್ತೇವೆ ಎನ್ನುವುದರ ಮೇಲೆ ಅವಲಂಬಿಸಿದೆ. ಸಮಸ್ಯೆ ಏನೆಂದು ಸರಿಯಾಗಿ ಅರಿಯದಿದ್ದರೆ ಅದರಿಂದ ಹೊರ ಬರುವುದು ಸಾಧ್ಯವಿಲ್ಲ. ಮಕ್ಕಳಾಗಲಿಲ್ಲ ಎಂದು ಕಂಡ ಕಂಡಲ್ಲಿ ಪರಿಹಾರ ಹುಡುಕುವ ಬದಲು, ಅದಕ್ಕೆ ಕಾರಣ ಹುಡುಕಿ ಸೂಕ್ತ ಕಾಲದಲ್ಲಿ ಚಿಕಿತ್ಸೆ ಪಡೆಯುವುದು ಅಗತ್ಯ.**



## ಪ್ರಶ್ನೆ? ಪರಿಹಾರ

ಡಾ|| ಆಶಾ. ಎಸ್.ವಿಜಯ್
ಗರ್ಭಗುಡಿ ಐವಿಎಫ್ ಸೆಂಟರ್
9886915556/ 080-26673777

ಪ್ರತಿ ದಿನ ಹಲವಾರು ಜನ ಮಕ್ಕಳಾಗಲಿಲ್ಲ, ಗರ್ಭ ನಿಲ್ಲುವುದಿಲ್ಲ, ಮುಟ್ಟಿನ ತೊಂದರೆ ಹೀಗೆ ಬೇರೆ ಬೇರೆ ತೊಂದರೆ ಹೊತ್ತು ನಮ್ಮ ಬಳಿ ಬರುವುದು ಅತ್ಯಂತ ಸಹಜವಾಗಿದೆ. ಒಬ್ಬೊಬ್ಬರದ್ದು ಒಂದೊಂದು ಸಮಸ್ಯೆ. ಹಾಗೆ ನೋಡಿದರೆ ಎಷ್ಟೋ ಸಾರಿ ಸಮಸ್ಯೆ ಬಹಳ ಸಣ್ಣದಾಗಿರುತ್ತದೆ. ಆದರೆ ಅವರಿಗೆ ಅದನ್ನು ಪರಿಹರಿಸಿಕೊಳ್ಳುವುದು ಗೊತ್ತಿರುವುದಿಲ್ಲ. ಸಮಸ್ಯೆಯನ್ನೇ ಸರಿಯಾಗಿ ಅರಿತಿರುವುದಿಲ್ಲ, ಯಾವುದೇ ಮಿರಾಕಲ್ ಆಗಿಬಿಡುತ್ತದೆ ಎಂದು ಭಾವಿಸಿರುತ್ತಾರೆ. ಇರುವ ಸಮಸ್ಯೆ ಒಂದು ಆದರೆ ಇವರು ಹೋಮ, ಹವನ, ಹರಕೆಗಳಲ್ಲಿ ದಿನ ಕಳೆದುಬಿಡುತ್ತಾರೆ. ಇಂತಹ ಹಲವಾರು ಘಟನೆಗಳಿವೆ. ಕೆಲವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವೆ.

ಅವಳ ಹೆಸರು ಸುಧಾಮಣಿ, ಅವಳು ತನ್ನ ಪತಿ ಶ್ರೀನಿವಾಸಮೂರ್ತಿ ಅವರೊಂದಿಗೆ ನಮ್ಮ ಕ್ಲಿನಿಕ್‌ಗೆ ಬಂದಳು ಇಬ್ಬರಿಗೂ ಆಗಲೇ 30 ದಾಟಿದೆ. ಮದುವೆಯಾಗಿ 5 ವರ್ಷಗಳಾಗಿದೆ. ಇನ್ನೂ ಮಕ್ಕಳಾಗಲಿಲ್ಲ ಎನ್ನುವುದು ಅವರ ಬಂದ ಕಾರಣ ಆಗಿತ್ತು ಅವರು ಇಲ್ಲಿಗೆ ಬರುವ ಮೊದಲು ಯಥಾ ಪ್ರಕಾರ ಪೂಜೆ, ಹರಕೆ ಎಲ್ಲ ಆಗಿತ್ತು. ಬೇರೆ ಬೇರೆ ಔಷದಿಗಳನ್ನು ತೆಗೆದು ಕೊಂಡಿದ್ದರು.

ಮೇಲ್ನೋಟಕ್ಕೆ ಗಂಡ ಹೆಂಡತಿ ಇಬ್ಬರೂ ಆರೋಗ್ಯವಾಗಿಯೇ ಇದ್ದರು. ಪರೀಕ್ಷಿಸಿದಾಗ ಆರೋಗ್ಯದಲ್ಲಿ ಏನೂ ತೊಂದರೆ ಇರಲಿಲ್ಲ. ಕೂಲಂಕುಷವಾಗಿ ಪರಿಶೀಲಿಸಿದಾಗ ಸುಧಾಮಣಿಯವರಿಗೆ ತಿಂಗಳು ತಿಂಗಳು ಮುಟ್ಟು ಆಗುತ್ತಿದ್ದರೂ ಅವರ ಅಂಡಾಶಯದಲ್ಲಿ ಅಂಡಗಳ ಉತ್ಪತ್ತಿಯ ಪ್ರಮಾಣ ಕಡಿಮೆ ಇತ್ತು. ಜೊತೆಗೆ ಅಂಡಗಲ ಪ್ರಮಾಣ ಬರು ಬರುತ್ತ ಕಡಿಮೆ ಆಗುವ ಸಾಧ್ಯತೆ ಇತ್ತು. ಇಷ್ಟೇ ಅಲ್ಲ ಅವರ ತಾಯಿಗೆ ಕೇವಳ 39 ವರ್ಷಕ್ಕೆ ಮುಟ್ಟು ನಿಂತುಹೋಗಿತ್ತು. ಹೀಗೆ ಚಿಕ್ಕ ವಯಸ್ಸಿನಲ್ಲಿಯೇ ಮುಟ್ಟು ನಿಲ್ಲುವ ಸಾಧ್ಯತೆಯನ್ನು ಇವರಲ್ಲಿಯೂ ಅಲ್ಲಗಳೆಯುವ ಹಾಗೆ ಇರಲಿಲ್ಲ. ಹಾಗಾಗಿ ಸುಧಾಮಣಿ ಅವರು ಇನ್ನು ವಿಳಂಬಿಸುವ ಹಾಗಿರಲಿಲ್ಲ. ನಾವು ಹೇಳಿದರೂ ಅವರು ಮನೆಯಲ್ಲಿ ಎಲ್ಲರ ಒಪ್ಪಿಗೆ ಪಡೆಯಬೇಕಿತ್ತು. ಸಹಜವಾಗಿಯೇ ಆಗಬಹುದು ಎಂದು ಕಾಯುತ್ತಿದ್ದರು. ಹೀಗೆ ವರ್ಷಗಲು ಉರುಳಿದವು ಮತ್ತೆ ಸುಮಾರು ಒಂದು ವರ್ಷದ ನಂತರ ದಂಪತಿಗಳು ಬಂದಾಗ ಮತ್ತು ಪರೀಕ್ಷೆಗಳು ನಡೆಯಿತು. ಆಗ ಅವರಿಗೆ ಥೈರಾಯ್ಡ್ ತೊಂದರೆ ಇರುವುದು ಕಂಡು ಬಂತು. ಮೊದಲು ಥೈರಾಯ್ಡ್ ನಿಯಂತ್ರಣಕ್ಕೆ ಬಂದ ನಂತರ ಮುಂದಿನ ಚಿಕಿತ್ಸೆ ಆರಂಭಿಸಲಾಯಿತು.

ಸುಧಾಮಣಿ ಅವರಿಗೆ ಒವೇರಿಯನ್‌ನಲ್ಲಿ ಅಂಡಗಳು ಸರಿಯಾಗಿ ಬೆಳೆಯುವ ಹಾಗೆ ಇಂಜೆಕ್ಷನ್ ಕೊಡಲಾಯಿತು. ಇಂಜೆಕ್ಷನ್ ಕೊಟ್ಟ ನಂತರ ಸೂಕ್ತ ಪರಿಶೀಲನೆ, ತಪಾಸಣೆ ಮಾಡಲಾಗುವುದು. ಸತ್ವಯುತ ಅಂಡಗಳು ಉತ್ಪತ್ತಿ ಆದಾಗ ಮುಂದಿನ ಹಂತವೇ ಐವಿಎಫ್. ಇದು ಸುಲಭ ಆಯಿತು. ಯಾವುದೇ ತೊಂದರೆ ಇಲ್ಲದೇ ಸುಧಾಮಣಿ ಮತ್ತು ಶ್ರೀನಿವಾಸ ದಂಪತಿಗಳು ಮಗುವನ್ನು ಪಡೆದರು. ಒವೇರಿಯನ್‌ನಲ್ಲಿ ಎಗ್ ಅಥವಾ ಅಂಡಗಳು ಉತ್ಪತ್ತಿ ಆಗುತ್ತಿರುತ್ತದೆ. ಎಷ್ಟೋ ಸಾರಿ ಅಂಡಗಳು ಶಕ್ತಿಯುತವಾಗಿ ಇರುವುದಿಲ್ಲ. ಎಷ್ಟೋ ಸರಿ ಅಂಡಗಳ ಉತ್ಪತ್ತಿ ಪ್ರಮಾಣವೇ ಅತ್ಯಂತ ಕಡಿಮೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಸಮಯ ವ್ಯರ್ಥ ಆಣಬಾರದು. ಮಕ್ಕಳಾಗಲಿಲ್ಲ ಎಂದು ಬರುವವರಲ್ಲಿ ಶೇಕಡ 40ಕ್ಕಿಂತ ಹೆಚ್ಚು ಜನರಿಗೆ ಈ ತೊಂದರೆಗಳಿರುತ್ತದೆ.

ಒವೆರಿಯನ್ ನಲ್ಲಿ ಅಂಡಗಳ ಕೊರತೆ ಇದೆ ಎನ್ನುವುದು ಅವರ 30ನೇ ವಯಸ್ಸಿನಿಂದಲೇ ಗೊತ್ತಾಗಿಬಿಡುತ್ತದೆ. ಮನೆಯಲ್ಲಿ ತಾಯಿ, ಅಜ್ಜಿ ಇವರ್‍ಯಾರಾದರೂ ಚಿಕ್ಕ ವಯಸ್ಸಿನಲ್ಲಿಯೇ ಮುಟ್ಟು ನಿಂತಿದೆ ಎಂದು ಹೇಳುತ್ತಿದ್ದರೆ ಬೇಗ ಮುಟ್ಟು ನಿಲ್ಲುವ ಸಾಧ್ಯತೆಯೂ ಇರಬಹುದು. ಈಗ ಮದುವೆಯ ವಯಸ್ಸೇ ಮುಂದೂಡಲಾಗುತ್ತಿದೆ. ಮದುವೆ ವಿಳಂಬ ಆಗಿದ್ದರೆ ಮಕ್ಕಳಾಗುವುದೂ ವಿಳಂಬ ಆಗುವುದು ಬೇಡ. ಯಾಕೆಂದರೆ ಹೀಗೆ ಎಗ್ ಉತ್ಪತ್ತಿಯೇ ಕಡಿಮೆ ಆದರೆ ಅಥವಾ ಉತ್ಪತ್ತಿಯೇ ನಿಂತು ಹೋದರೆ ಕಷ್ಟ ಆಣಬಹುದು. ಮಕ್ಕಳನ್ನು ಪಡೆಯುವ ವಿಷಯದಲ್ಲಿ ಗಂಡ ಹೆಂಡತಿ ವಿಳಂಬ ಮಾಡದೇ, ಸೂಕ್ತ ಕಾಲದಲ್ಲಿ, ಸರಿಯಾದ ಚಿಕಿತ್ಸೆ ಪಡೆಯುವುದು ಅಗತ್ಯ.

### ಪ್ರಶ್ನೆ ಪರಿಹಾರ

**ಇನ್ನೂ ಯಾಕೆ ಮಕ್ಕಳಾಗುತ್ತಿಲ್ಲ, ತೊಂದರೆ ಏನಿರಬಹುದು?**

ಇತ್ಯಾದಿ ನಿಮ್ಮ ಪ್ರಶ್ನೆಗಳಿಗೆ ಈ ಅಂಕಣದಲ್ಲಿ ತಜ್ಞ ವೈದ್ಯರು ಉತ್ತರಿಸುತ್ತಾರೆ.
ನಿಮ್ಮ ಪ್ರಶ್ನೆಗಳನ್ನು ಈ ವಿಳಾಸಕ್ಕೆ ಕಳುಹಿಸಿ 210/ಎ, 50 ಅಡಿ ರಸ್ತೆ,
14ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು–560 050

ದೂರವಾಣಿ/ಎಸ್‌ಎಂಎಸ್: **98869 15556**